ಕರ್ನಾಟಕ ಸರ್ಕಾರ

ಮೇ 17, 2017

# ಜೂನ್ 5 ರಿಂದ 16 ರವರೆಗೆ ರಾಜ್ಯ ವಿಧಾನ ಮಂಡಲದ ಮುಂದುವರೆದ ಆಯವ್ಯಯ ಅಧಿವೇಶನ

ಬೆಂಗಳೂರು, ಮೇ 17 :

ರಾಜ್ಯ ವಿಧಾನ ಮಂಡಲದ ಮುಂದುವರೆದ ಆಯವ್ಯಯ ಅಧಿವೇಶನವನ್ನು ಜೂನ್ 5 ರಿಂದ 16 ರವರೆಗೆ ನಡೆಸಲು ರಾಜ್ಯ ಸಚಿವ ಸಂಪುಟವು ತೀರ್ಮಾನಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ರಾಜ್ಯ ಸಚಿವ ಸಂಪುಟ ಸಭೆಯ ನಂತರ, ಸಣ್ಣ ನೀರಾವರಿ, ಕಾನೂನು ಮತ್ತು ಸಂಸದೀಯ ಸಚಿವ ಟಿ. ಬಿ. ಜಯಚಂದ್ರ ಅವರು ಪತ್ರಿಕಾಗೋಷ್ಠಿಯಲ್ಲಿ ಈ ವಿಷಯವನ್ನು ಪ್ರಕಟಿಸಿದರು.

## ಅಕ್ರಮ ಸಕ್ರಮ ಪರಿಮಿತಿ ಮರುನಿಗದಿಗೆ ಅನುಮೋದನೆ

ಅಕ್ರಮ ಸಕ್ರಮ ಯೋಜನೆಗೆ ಸಂಬಂಧಿಸಿದಂತೆ ಮಹಾನಗರ ಪಾಲಿಕೆ, ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗಳಲ್ಲಿನ ಪರಿಮಿತಿಯನ್ನು 94 (ಸಿ) (ಸಿ) ಅಡಿಯಲ್ಲಿ ಮರುನಿಗಧಿ ಮಾಡಲು ಸಂಪುಟ ಅನುಮೋದನೆ ನೀಡಿದೆ. ಮಹಾನಗರ ಪಾಲಿಕೆಗಳ ಕೇಂದ್ರ ಸ್ಥಾನದಿಂದ 18 ಕಿ. ಮೀ ಹೊರ ವ್ಯಾಪ್ತಿಯ ಪರಿಮಿತಿಯೊಳಗೆ (ಬಫರ್ ಜೋನ್) 30 ಅಡಿ ಮತ್ತು 40 ಅಡಿ ಅಳತೆಯ ನಿವೇಶನ ಅಂದರೆ 1200 ಚದುರ ಅಡಿವರೆಗಿನ ನಿವೇಶನದಲ್ಲಿ ಅಕ್ರಮವಾಗಿ ನಿರ್ಮಿಸಿರುವ ಮನೆಗಳನ್ನು ಸಕ್ರಮಗೊಳಿಸಲು ಅನುಮೋದನೆ ನೀಡಲಾಗಿದೆ. ಅಂತೆಯೇ, ನಗರಸಭೆ ಪ್ರದೇಶದಲ್ಲಿ 10 ಕಿ ಮೀ ಹೊರ ವ್ಯಾಪ್ತಿಯಲ್ಲಿ ಪುರಸಭೆ ಪ್ರದೇಶದಲ್ಲಿ ಐದು ಕಿ ಮೀ ಹಾಗೂ ಪಟ್ಟಣ ಪಂಚಾಯಿತಿ ಪ್ರದೇಶದಲ್ಲಿ ಮೂರು ಕಿ. ಮೀ ಹೊರ ವ್ಯಾಪ್ತಿಯಲ್ಲಿ ಈಗಾಗಲೇ ನಿರ್ಮಿಸಿರುವ ಅಕ್ರಮ ಮನೆಗಳನ್ನು ಸಕ್ರಮಗೊಳಿಸಲು ಸಾಮಾನ್ಯ ವರ್ಗದವರಿಗೆ 10,000 ರೂ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು, ವಿಕಲಚೇತನರು, ಪೌರ ಕಾರ್ಮಿಕರು ಹಾಗೂ ಮಾಜಿ ಯೋಧರಿಗೆ ಐದು ಸಾವಿರ ರೂ ಶುಲ್ಕ ವಿಧಿಸಲು ಸಂಪುಟ ಒಪ್ಪಿಗೆ ನೀಡಿದೆ.

## ಕೃಷಿ ವಿಶ್ವವಿದ್ಯಾಲಯಕ್ಕೆ ಜಮೀನು

ಶಿವಮೊಗ್ಗದ ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾಲಯಕ್ಕೆ ಅದೇ ತಾಲ್ಲೂಕಿನ ಇರುವಕ್ಕಿ ಗ್ರಾಮದ ಸಮೀಪ 600 ಎಕರೆ ಜಮೀನು ಮಂಜೂರು ಮಾಡಿ 138.69 ಕೋಟಿ ರೂ ವೆಚ್ಚದಲ್ಲಿ ಎರಡು ವರ್ಷಗಳೊಳಗೆ ಸ್ವಂತ ಕಟ್ಟಡ ನಿರ್ಮಿಸಿಕೊಳ್ಳಲು ಸಚಿವ ಸಂಪುಟ ಸಮ್ಮತಿಸಿದೆ.

## ಆಹಾರ ಧಾನ್ಯದ ಆಯ್ಕೆ ಫಲಾನುಭವಿಗಳಿಗೆ !

ಪ್ರಸಕ್ತ ಸಾಲಿನ 2017–18 ನೇ ಸಾಲಿನ ಆಯವ್ಯಯದಲ್ಲಿ ಘೋಷಣೆ ಮಾಡಿರುವಂತೆ ಅನ್ನಭಾಗ್ಯ ಯೋಜನೆಯಲ್ಲಿ ಏಪ್ರಿಲ್ ತಿಂಗಳಿನಿಂದ ನೀಡುತ್ತಿರುವ ಆಹಾರ ಧಾನ್ಯದ ಪ್ರಮಾಣವನ್ನು ಐದು ಕೆ ಜಿ ಯಿಂದ ಏಳು ಕೆ. ಜಿ ಗೆ ಹೆಚ್ಚಿಸಲು ಘಟನೋತ್ತರ ಮಂಜೂರಾತಿ ನೀಡಿದ ಸಚಿವ ಸಂಪುಟವು ತಮ್ಮ ಇಚ್ಛೆಯಂತೆ ಆಹಾರ ಧಾನ್ಯ ಪಡೆಯಲು ಅಂದರೆ ಅಕ್ಕಿ ಅಥವಾ ಗೋಧಿ ಪಡೆಯುವ ಆಯ್ಕೆಯ ಅವಕಾಶವನ್ನು ಫಲಾನುಭವಿಗಳಿಗೆ ನೀಡಿದೆ.

## ವಾರ್ಷಿಕ 1.2 ಲಕ್ಷ ರೂ ಗಿಂತಲೂ ಕಡಿಮೆ ಆದಾಯವಿದ್ದಲ್ಲಿ ಆಧ್ಯತಾ ಕುಟುಂಬ

ರಾಷ್ಟ್ರೀಯ ಆಹಾರ ಭದ್ರತಾ ಕಾಯಿದೆ – 2013 ರ ಅಡಿ ಆಧ್ಯತಾ ಕುಟುಂಬಗಳನ್ನು ಗುರುತಿಸಲು ಕುಟುಂಬದ ವಾರ್ಷಿಕ ಆದಾಯ ಮಿತಿ 1.20 ಲಕ್ಷ ರೂ ಗಳಿಗಿಂತಲೂ ಕಡಿಮೆಗೆ ನಿಗಧಿಪಡಿಸಲು ಸಚಿವ ಸಂಪುಟವು ಘಟನೋತ್ತರ ಮಂಜೂರಾತಿ ನೀಡಿದೆ.

## ದಾಸೋಹ ಯೋಜನೆ

ಕೇಂದ್ರ ಸರ್ಕಾರದ ಇತರೆ ಕ್ಷೇಮಾಭಿವೃದ್ಧಿ ಯೋಜನೆಯಡಿ ಸಹಾಯಧನ–ಯುಕ್ತ ಆಹಾರ ಧಾನ್ಯಗಳನ್ನು ಪಡೆಯುವ ಕಲ್ಯಾಣ ಸಂಸ್ಥೆಗಳಿಗೆ ದಾಸೋಹ ಯೋಜನೆಯಡಿ ಆಹಾರ ಧಾನ್ಯಗಳನ್ನು ಸರ್ಕಾರವೇ ಉಚಿತವಾಗಿ ಒದಗಿಸಲು ಸಂಪುಟವು ಸಮ್ಮತಿಸಿದೆ.

ಅನಾಥಾಶ್ರಮ, ಅಬಲಾಶ್ರಮ, ವೃದ್ಧಾಶ್ರಮ,ಅಂಧ ಮಕ್ಕಳ ಶಾಲೆ, ವಿಕಲಚೇತನರ ಆಶ್ರಯದಾಣಗಳು, ನಾರಿ ನಿಕೇತನ, ಭಿಕ್ಷುಕರ ಪರಿಹಾರ ಹಾಗೂ ಪುನರ್ವಸತಿ ಕೇಂದ್ರಗಳಿಗೆ ಕೇಂದ್ರ ಸರ್ಕಾರವು ಪ್ರತಿ ಕೆ ಜಿಗೆ 5.65 ರೂ ದರದಲ್ಲಿ ಒದಗಿಸುತ್ತಿರುವ ಅಕ್ಕಿ 4.15 ರೂ ನಂತೆ ಒದಗಿಸುತ್ತಿರುವ ಗೋಧಿಯನ್ನು ಹಾಗೂ ಇತರೆ ಅಗತ್ಯ ವಸ್ತುಗಳನ್ನು ಉಚಿತವಾಗಿ ಒದಗಿಸಲು ಸಚಿವ ಸಂಪುಟವು ತೀರ್ಮಾನಿಸಿದೆ. ಸಂಪುಟದ ಈ ಮಹತ್ವದ ತೀರ್ಮಾನದಿಂದ ಅಕ್ಕಿ ಪೂರೈಕೆಗೆ ವಾರ್ಷಿಕವಾಗಿ 8.97 ಕೋಟಿ ರೂ ಹಾಗೂ ಗೋಧಿಗೆ 2.83 ಕೋಟಿ ರೂ ಒಳಗೊಂಡಂತೆ ರಾಜ್ಯ ಬೊಕ್ಕಸಕ್ಕೆ 35.4 ಕೋಟಿ ರೂ ಹೊರೆ ಬೀಳಲಿದೆ.

## ಸಾಮಾಜಿಕ ಪರಿಶೋಧನೆ

ನ್ಯಾಯಬೆಲೆ ಅಂಗಡಿ ಹಂತದಲ್ಲಿ ಜಾಗೃತ ಸಮಿತಿಗಳನ್ನು ರಚಿಸಿ ಅವುಗಳ ಮೂಲಕ ಪಾರದರ್ಶಕತೆ ಹಾಗೂ ಹೊಣೆಗಾರಿಕೆಯನ್ನು ಸದೃಢಗೊಳಿಸಲು ನ್ಯಾಯಬೆಲೆ ಅಂಗಡಿಗಳ ಕಾರ್ಯನಿರ್ವಹಣೆಯನ್ನು ಸಾಮಾಜಿಕ ಪರಿಶೋಧನೆ ಒಳಪಡಿಸಲು ಸಂಪುಟ ತೀರ್ಮಾನಿಸಿದೆ. ಅಂತೆಯೇ, ಜಾಗೃತ ಸಮಿತಿ ಸದಸ್ಯರಿಗೆ 150 ರೂ ಸಭಾ ಭತ್ಯೆ ನೀಡಲೂ ಅವಕಾಶ ಕಲ್ಪಿಸಲಾಗಿದೆ.

## ಅಣೆಕಟ್ಟುಗಳ ಪುನಶ್ಚೇತನ

ಸುರಕ್ಷಾ ಮಾನದಂಡಗಳಿಗೆ ಅನುಗುಣವಾಗಿ ಅಮಾರ್ಥ್ಯ, ಆಲಮಟ್ಟಿ, ಕಬಿನಿ, ಕೃಷ್ಣರಾಜ ಸಾಗರ, ಭದ್ರಾ, ಬೆಣ್ಣೆತೊರಾ, ಹಾರಂಗಿ, ಹಿಡ್ಕಲ್ ಹಾಗೂ ಹೇಮಾವತಿ ಸೇರಿದಂತೆ ರಾಜ್ಯದ 22 ಅಣೆಕಟ್ಟುಗಳನ್ನು 571 ಕೋಟಿ ರೂ. ವೆಚ್ಚದಲ್ಲಿ ಪುನಶ್ಚೇತನಗೊಳಿಸಲು ಸಚಿವ ಸಂಪುಟ ನಿರ್ಧರಿಸಿದೆ.

## ಗರ್ಭಗುಡಿಯಲ್ಲಿ ಪಿಕ್‌ಅಪ್ ಡ್ಯಾಂ

ಹಾವೇರಿ ಜಿಲ್ಲೆಯ ರಾಣೇಬೆನ್ನೂರು ತಾಲ್ಲೂಕು ಗರ್ಭಗುಡಿ ಹತ್ತಿರ ತುಂಗಭದ್ರಾ ನದಿಗೆ ಅಡ್ಡಲಾಗಿ 51.40 ಕೋಟಿ ರೂ ವೆಚ್ಚದಲ್ಲಿ ಪಿಕ್‌ಅಪ್ ಡ್ಯಾಂ ಮತ್ತು ಸೇತುವೆ ನಿರ್ಮಿಸಿ 4,500 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಸಂಪುಟ ಅನುಮೋದನೆ ನೀಡಿದೆ.

## ಪರಿಶಿಷ್ಟರ ಪಟ್ಟಿಗೆ ಬಾಂಗ್ಲಾ ವಲಸಿಗರು

ಬಾಂಗ್ಲಾದೇಶದಿಂದ ವಲಸೆ ಬಂದು ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನಲ್ಲಿ ನೆಲೆಸಿ ಭಾರತೀಯ ಪೌರತ್ವವನ್ನು ಪಡೆದಿರುವ ನಾಮಶೂದ್ರ, ಪೊಡ್ ಅಥವಾ ಪೌಂಡ್ರ ಹಾಗೂ ರಾಜಬುಶಿ ಜಾತಿಗಳನ್ನು ಕರ್ನಾಟಕ ರಾಜ್ಯದ ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿ ಸೇರಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಸಂಪುಟ ನಿರ್ಧರಿಸಿದೆ.

ಲಭ್ಯವಿರುವ ಅಂಕಿ–ಅಂಶಗಳ ಪ್ರಕಾರ, ಈ ಪ್ರದೇಶದಲ್ಲಿ ನಾಮಶೂದ್ರರ ಜನಸಂಖ್ಯೆ 8024, ಪೊಡ್ ಅಥವಾ ಪೌಂಡ್ರರ ಜನಸಂಖ್ಯೆ 118 ಹಾಗೂ ರಾಜಬುಶಿ ಜನಸಂಖ್ಯೆ 102 ಇದೆ.

## ಆರೋಗ್ಯ ಭವನ : ಡಿಸೆಂಬರ್ ಒಳಗೆ ಪೂರ್ಣ

ಬೆಂಗಳೂರಿನ ಮಾಗಡಿ ರಸ್ತೆಯಲ್ಲಿ ನಿರ್ಮಿಸಲಾಗುತ್ತಿರುವ ಆರೋಗ್ಯ ಭವನದ ಮೊದಲನೇ ಹಾಗೂ ಎರಡನೇ ಹಂತದ ಕಾಮಗಾರಿಗಳಿಗೆ ತಗಲುವ ವ್ಯತ್ಯಾಸದ ಹೆಚ್ಚುವರಿ ವೆಚ್ಚ 22.85 ಲಕ್ಷ

ರೂ. ಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿರುವ ಸಂಪುಟವು ರಾಜ್ಯದ ರಾಜಧಾನಿಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಎಲ್ಲಾ ಕಚೇರಿಗಳೂ ಒಂದೇ ಸೂರಿನಡಿ ಕಾರ್ಯ ನಿರ್ವಹಿಸಲು ಅನುಕೂಲವಾಗಲಿರುವ ಆರೋಗ್ಯ ಭವನದ ಕಾಮಗಾರಿಗಳನ್ನು ಡಿಸೆಂಬರ್ ಒಳಗೆ ಪೂರ್ಣಗೊಳಿಸಬೇಕೆಂದು ಸೂಚಿಸಿದೆ.

## ಹೊರಗುತ್ತಿಗೆ ಆಧಾರದ ಮೇರೆಗೆ ಸಿಬ್ಬಂದಿ ನೇಮಕಕ್ಕೆ ಅಸ್ತು

ವಸತಿ ಇಲಾಖೆಯಲ್ಲಿ ಅಂಬೇಡ್ಕರ್, ಬಸವ, ವಾಜಪೇಯಿ, ಆವಾಸ್ ಯೋಜನೆ ಒಳಗೊಂಡಂತೆ ಸೂರಿಲ್ಲದವರಿಗೆ ಸೂರು ಕಲ್ಪಿಸುವ ವಿವಿಧ ಯೋಜನೆಗಳಡಿ ಪ್ರಸಕ್ತ ವರ್ಷ ನಾಲ್ಕು ಲಕ್ಷ ಮನೆಗಳನ್ನು ನಿರ್ಮಿಸಲು ಯೋಜಿಸಲಾಗಿದೆ.

ಕಳೆದ ಸಾಲಿನಲ್ಲಿ ನಿರ್ಮಿಸಿರುವ ಹಾಗೂ ಪ್ರಸಕ್ತ ಸಾಲಿನಲ್ಲಿ ಹತ್ತು ಲಕ್ಷ ಫಲಾನುಭವಿಗಳನ್ನು ಗುರುತಿಸುವಂತೆ ಸಂಪುಟವು ಒಪ್ಪಿಗೆ ನೀಡಿದೆ. ಮನೆ ನಿರ್ಮಾಣ ಹಾಗೂ ಫಲಾನುಭವಿಗಳ ಗುರುತಿಸುವ ಕಾರ್ಯಕ್ಕೆ ಅನುವಾಗುವಂತೆ ವಸತಿ ಇಲಾಖೆಗೆ ಹೊರಗುತ್ತಿಗೆಯ ಆಧಾರದ ಮೇರೆಗೆ ಮೂರು ವರ್ಷಗಳ ಅವಧಿಗೆ ಅಗತ್ಯ ಇಂಜಿನಿಯರಿಂಗ್ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲು ಸಂಪುಟ ಅನುಮೋದನೆ ನೀಡಿದೆ.

## ಸರ್ಕಾರಿ ಇಂಜಿನಿಯರಿಂಗ್ ಕಾಲೇಜು

ಬೀದರ್‌ನಲ್ಲಿ 58 ಕೋಟಿ ರೂ. ವೆಚ್ಚದಲ್ಲಿ ಹೊಸ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಸ್ಥಾಪಿಸಲು ಸಚಿವ ಸಂಪುಟ ಒಪ್ಪಿಗೆ ನೀಡಿದೆ. ಅದರಲ್ಲಿ 20 ಕೋಟಿ ರೂ. ಅನುದಾನವನ್ನು ಹೈದರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಹಾಗೂ 38 ಕೋಟಿ ರೂ ಅನುದಾನವನ್ನು ರಾಜ್ಯ ಸರ್ಕಾರ ಭರಿಸಲು ಸಂಪುಟ ತೀರ್ಮಾನಿಸಿದೆ.

## ಸಿವಿಲ್ ಸೇವೆಗಳಲ್ಲಿ ಮೀಸಲಾತಿ : ಆಯೋಗದಿಂದ ಅಪರ ಮುಖ್ಯ ಕಾರ್ಯದರ್ಶಿಗೆ

ಬಿ. ಕೆ. ಪವಿತ್ರ ಮತ್ತು ಇತರರು ಯೂನಿಯನ್ ಆಫ್ ಇಂಡಿಯಾ ವಿರುದ್ಧ ಹೂಡಿರುವ ಸಿವಿಲ್ ಪ್ರಕರಣದಲ್ಲಿ ಭಾರತ ಸರ್ವೋಚ್ಛ ನ್ಯಾಯಾಲಯವು ನೀಡಿರುವ ತೀರ್ಪಿನ ಹಿನ್ನೆಲೆಯಲ್ಲಿ ರಾಜ್ಯ ನಾಗರೀಕ ಸೇವೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅಧಿಕಾರಿ ಮತ್ತು ನೌಕರರಿಗೆ ಸಂಬಂಧಿಸಿದಂತೆ ವರದಿ ಸಲ್ಲಿಸುವಂತೆ ಕರ್ನಾಟಕ ರಾಜ್ಯದ ಹಿಂದುಳಿದ ವರ್ಗಗಳ ಆಯೋಗಕ್ಕೆ ಈ ಹಿಂದೆ ನೀಡಲಾಗಿದ್ದ ಆದೇಶವನ್ನು ಹಿಂಪಡೆದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗೆ ವಹಿಸಿರುವ ಕ್ರಮಕ್ಕೆ ಸಂಪುಟ ಘಟನೋತ್ತರ ಮಂಜೂರಾತಿ ನೀಡಿದೆ.

## ಪ್ರೌಢ ಶಾಲಾ ಶಿಕ್ಷಕರ ನೇಮಕ

ಪ್ರತಿಭೆ ಹಾಗೂ ಮೀಸಲಾತಿ ಆಧಾರದ ಮೇರೆಗೆ ಪ್ರಸಕ್ತ 2017–18 ನೇ ಸಾಲಿನಿಂದ 2019–20 ನೇ ಸಾಲಿನವರೆಗೆ ಪ್ರೌಢ ಶಾಲಾ ಶಿಕ್ಷಕರ ನೇಮಕಕ್ಕೆ ಅನುವಾಗುವಂತೆ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಿಗೆ ತಿದ್ದುಪಡಿ ತರಲು ಸಂಪುಟ ಅನುಮೋದನೆ ನೀಡಿದೆ.

## ರಸ್ತೆ ಅಭಿವೃದ್ಧಿಗೆ ಆಡಳಿತಾತ್ಮಕ ಅನುಮೋದನೆ

ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ರಾಜ್ಯ ಹೆದ್ದಾರಿ ಸಂಖ್ಯೆ : 107 ರಲ್ಲಿ ವ್ಯಾಪ್ತಿಯ ಜನ್ನಾಪುರ–ವಣಗೂರು ರಸ್ತೆಯನ್ನು ಹಾನುಬಾಳು – ಆನೆಮಹಲ್ – ಜಾನಕೆರೆ – ಬ್ಯಾಕರವಳ್ಳಿ – ಹೆತ್ತೂರು ರಸ್ತೆಯ ಮಾರ್ಗವಾಗಿ 7 ಕಿ ಮೀ ನಿಂದ 57.84 ಕಿ. ಮೀ ವರೆಗೆ 29.64 ಕೋಟಿ ರೂ. ಪರಿಷ್ಕೃತ ಅಂದಾಜು ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಮಾಡಲು ಸಂಪುಟ ಆಡಳಿತಾತ್ಮಕ ಅನುಮೋದನೆ ನೀಡಿದೆ.

## ಕರ ಸಮಾಧಾನ ಅವಧಿ ವಿಸ್ತರಣೆ

ಅಬಕಾರಿ ಬಾಕಿ ವಸೂಲಾತಿಗಾಗಿ ರೂಪಿಸಿರುವ ಕರ ಸಮಾಧಾನ ಯೋಜನೆಯ ಅವಧಿಯನ್ನು ವಿಸ್ತರಿಸಲಾಗಿದೆ. ಪ್ರಪ್ರಥಮ ಬಾರಿಗೆ 2002 ರಲ್ಲಿ ರೂಪಿಸಿದ ಈ ಯೋಜನೆ 12 ಕೋಟಿ ರೂ, ಎರಡನೇ ಬಾರಿಗೆ 2006 ರಲ್ಲಿ 34 ಕೋಟಿ ರೂ, ಮೂರನೇ ಬಾರಿಗೆ 2010 ರಲ್ಲಿ 18 ಕೋಟಿ ರೂ ಹಾಗೂ ನಾಲ್ಕನೇ ಬಾರಿಗೆ 2017 ರಲ್ಲಿ ಮಾರ್ಚ್ ಅಂತ್ಯದ ವರೆಗೆ 37.13 ಕೋಟಿ ರೂ ರಾಜಸ್ವ ಸಂಗ್ರಹಣೆಯಾಗಿದೆ. ಇದೀಗ ನಾಲ್ಕನೇ ಹಂತದ ಕರ ಸಮಾಧಾನ ಯೋಜನೆಯನ್ನು ಈ ಸಾಲಿನ ಅಕ್ಟೋಬರ್ ಅಂತ್ಯದವರೆಗೆ ವಿಸ್ತರಿಸಲು ಸಂಪುಟ ಸಮ್ಮತಿಸಿದೆ.

## ಕೌಶಲ್ಯಾಭಿವೃದ್ಧಿ ಕೋಶ ರಚನೆ

ಹೊಸದಾಗಿ ಸೃಜಿಸಿದ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತಾ ಮತ್ತು ಜೀವನೋಪಾಯ ಇಲಾಖೆಯಲ್ಲಿ ಕೌಶಲ್ಯಾಭಿವೃದ್ಧಿಯ ಚಟುವಟಿಕೆಗಳನ್ನು ಮಿಷನ್ ಮೋಡ್ ಆಧಾರದ ಮೇರೆಗೆ ತೀವ್ರಗೊಳಿಸಲು ಕೋಶ ರಚನೆ ಹಾಗೂ ಇತರೆ ಏಜೆನ್ಸಿಗಳ ಸ್ಥಾಪನೆ ಸಂಪುಟ ಒಪ್ಪಿಗೆ ನೀಡಿದೆ.

**ಮೆಗಾ ಮಾರುಕಟ್ಟೆ**

**ವಿಜಯಪುರ ಜಿಲ್ಲೆಯ ಬಸವನಬಾಗೇವಾಡಿ ಪುರಸಭೆ ವ್ಯಾಪ್ತಿಯಲ್ಲಿ ಸುಸಜ್ಜಿತ ಮೆಗಾ ಮಾರುಕಟ್ಟೆ ಸಂಕೀರ್ಣವನ್ನು 32.73 ಕೋಟಿ ರೂ ವೆಚ್ಚದಲ್ಲಿ ನಿರ್ಮಿಸಲು ಸಂಪುಟ ಆಡಳಿತಾತ್ಮಕ ಅನುಮೋದನೆ ನೀಡಿದೆ ಎಂದು ಟಿ. ಬಿ. ಜಯಚಂದ್ರ ಅವರು ವಿವರ ನೀಡಿದರು.**

*************

**ಡಿ ಪಿ ಎಂ : ಕೆ ಪಿ ಪಿ**